O.S.No.98/2015
DW -1

ದಿನಾಂಕ 03/04/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

<u>ಪಾಟೀ ಸವಾಲು :- ಶ್ರೀ ಪಿ.ಡಿ.ಟಿ ವಾದಿ ಪರ ವಕೀಲರಿಂದ</u>

ದಾವಾಸ್ತಿ ಕುರಿತು ವಾದಿ ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿ. ದಾವಾಸ್ತಿ ಮೂಲತಃ ಮಧುಗಿರಿ ಪುರಸಭೆ ಸ್ವತ್ತಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಮಧುಗಿರಿ ಪುರಸಭೆಗೆ ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾಸ್ವತ್ತು ತುಮಕೂರು ಗೇಟ್ ಕಡೆಯಿಂದ ಪೂರ್ವದ ಕಡೆ ಇರುತ್ತದೆ ಎಂದರೆ ಸರಿ. ತುಮಕೂರು ಗೇಟ್ ರಸ್ತೆಯ ಪೂರ್ವ ದಿಕ್ಕಿಗೆ ಹಾಲಿ ಈಜುಕೊಡ, ಪೆಟ್ರೋಲ್ ಬಂಕ್ ಮತ್ತು ಅದರ ಹಿಂಭಾಗದ ಹಿಡುವಳಿ ಜಾಗ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪೆಟ್ರೋಲ್ ಬಂಕ್ ವಾದಿಗೆ ಸೇರಿದ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಸ್ವತ್ತು ಸ.ನಂ.46/4 ಎಂದರೆ ಸರಿಯಲ್ಲ. ಸ.ನಂ.46/3 ಮತ್ತು 46/4 ವಾದಿಗಳ ಪಿತ್ರಾರ್ಜಿತ ಜಮೀನು ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ಈಜುಕೊಳ ಸ.ನಂ.44/1 ಇರುತ್ತದೆ ಎಂದು ನುಡಿಯುತ್ತಾರೆ. ಈಜುಕೊಳ ಸ.ನಂ.44/1 ರಲ್ಲಿ ಇರುತ್ತದೆ. ನಿಡಿ-39 ರಲ್ಲಿ ಈಜು ಕೊಳದ ಜಾಗ ಎಂದು ಬರೆದಿರುವುದಿಲ್ಲ ಎಂದರೆ ಸರಿ. ಸ.ನಂ.44/1 ಎಷ್ಟು ವರ್ಷಗಳ ಹಿಂದೆ ಪೋಡುಗಳಾಗಿರುತ್ತದೆ ಎಂದು ನನಗೆ ಗೊತ್ತಿರುವುಲ್ಲ. ಸ.ನಂ.44/1 ಮತ್ತು ಸ.ನಂ.44/4 ಒಂದೇ ಅಥವಾ ಬೇರೆ-ಬೇರೆ ಎಂದರೆ ಸಾಕ್ಷಿಯು ಬೇರೆ ಬೇರೆ ಎಂದು ಉತ್ತರಿಸಿರುತ್ತಾರೆ. 1965 ರಿಂದ ದಾವೆ ಹೂಡುವ ಕಾಲಕ್ಕೆ ಸ.ನಂ.44/1 ಅಸ್ತಿತ್ವದಲ್ಲಿ ಇರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸ.ನಂ.44/1 ಪುರಸಭೆಗೆ ಯಾವಾ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸ.ನಂ.46/4 ಆಸ್ತಿಯು ಪುರಸಭೆಗೆ ಧಾನದ ಮೂಲಕ ಬಂದಿರುತ್ತದೆ. ನಾನು ದಾಖಲೆಗಳನ್ನು ಪರಿಶೀಲನೆ ಮಾಡಿದಾಗ

ಸ.ನಂ.46/4 ನ್ನು ಯಾರು ಧಾನ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸ.ನಂ.46/4 ರ ಆಸ್ತಿಯನ್ನು ಯಾರು ಧಾನ ಮಾಡಿರುತ್ತಾರೆ ಎನ್ನುವ ಬಗ್ಗೆ ಪುರಸಭೆಯಿಂದ ದಾಖಲಾತಿಗಳನ್ನು ಪಡೆದುಕೊಂಡು ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ. ನಿಡಿ-1 ರಲ್ಲಿ ಸ.ನಂ.44/1 ನ್ನು ನಮೂದಿಸಿದ ಬಗ್ಗೆ ಠರಾವು ಇರುವುದಿಲ್ಲ ಎಂದರೆ ಸರಿ. ಈಜುಕೊಳವನ್ನು ಮುಚ್ಚುವ ಬಗ್ಗೆ ಜಿಲ್ಲಾಧಿಕಾರಿಗಳು ಯಾವುದಾದರೂ ಆದೇಶ ಮಾಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಮ್ಮ ಕಛೇರಿಯಲ್ಲಿ ಈಜುಕೊಳವನ್ನು ಮುಚ್ಚುವ ಬಗ್ಗೆ ಯಾವುದೇ ದಾಖಲೆಗಳು ಇದೆಯಾ ಎಂದರೆ ಸಾಕ್ಷಿ ಠರಾವು ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಮ್ಮ ಠರಾವಿನಲ್ಲಿ ಈಜುಕೊಳವನ್ನು ಮುಚ್ಚಿ ತಂತಿ ಬೇಲಿ ಹಾಕುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಯಾವುದೇ ಮನವಿ ಕೊಟ್ಟಿರುವುದಿಲ್ಲ ಮತ್ತು ಆ ರೀತಿ ಯಾವುದೇ ಆದೇಶ ಮಾಡಿರುವುದಿಲ್ಲ ಎಂದರೆ ಸರಿ. ನಿಡಿ-6 ರ ಪ್ರಕಾರ ಜಿಲ್ಲಾಧಿಕಾರಿಗಳು ಈಜುಕೊಳಕ್ಕೆ ಕೇವಲ ತಂತಿ ಬೇಲಿ ಹಾಕುವ ಕುರಿತು ಆದೇಶ ಆಗಿರುತ್ತದೆ ಎಂದರೆ ಸರಿ.

ನನ್ನ ಅನುಭವದಲ್ಲಿ ಈಜುಕೊಳಕ್ಕೆ ತಂತಿಬೇಲಿ ಹಾಕಿಸಲು ಎಷ್ಟು ಖರ್ಚಾಗುತ್ತದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆದರೆ ಇಂಜಿಯರ್ ರವರು ಎಸ್ಟಿಮೇಟ್ ಮಾಡುತ್ತಾರೆ ಎಂದು ಉತ್ತರಿಸಿರುತ್ತಾರೆ. ಈಜುಕೊಳವನ್ನು ಮುಚ್ಚಲು ಜಿಲ್ಲಾಧಿಕಾರಿಗಳು ಪುರಸಭೆಯಿಂದ ಯಾವುದೇ ಆದೇಶ ಆಗಿಲ್ಲ ಎಂದರೆ ಸರಿ. ವಾಗಳು ಈಜುಕೊಳದ ಸಂಬಂಧ ನಿಪಿ-4 ರಂತೆ ನೋಟಿಸ್ ಕೊಟ್ಟಿದ್ದು ನಿಪಿ-6 ರಂತೆ ನಮ್ಮ ಕಛೇರಿಯವರು ಸ್ವೀಕರಿಸಿರುತ್ತಾರೆ ಎಂದರೆ ಸರಿ. ನಿಪಿ-4 ರ ನೋಟಿಸ್ ನಮ್ಮ ಕಛೇರಿಯಿಂದ ಪ್ರತ್ಯುತ್ತರ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈಜುಕೊಳಕ್ಕೆ ತಂತಿ ಬೇಲಿ ಹಾಕಿಸಲು ಕೇವಲ 5-6 ಸಾವಿರ ಖರ್ಚಾಗುತ್ತಿದ್ದು ನಾವು ಹಣ ದುರ್ಬಳಕೆ ಮಾಡುವ ಸಂಬಂಧ 1,54,058/- ರೂ.ಗಳ ಟೆಂಡರ್ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಈಜುಕೊಳ ಸ.ನಂ.46/4 ರಲ್ಲಿ ಇದ್ದು, ನಾನು ಹೇಳಿದ ರೀತಿ ಸ.ನಂ.44/1 ರಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ಈಜುಕೊಳ ನಿರ್ಮಾಣ ಮಾಡುವ ಉದ್ದೇಶದಿಂದ ವಾದಿಗಳ ತಾತ ಸುಬ್ಬರಾವ್ ಇವರು ಮೌಖಿಕವಾಗಿ ಜುಬಾನಿ ಧಾನವನ್ನು ನಿರ್ಧಿಷ್ಟ ಉದ್ದೇಶಕ್ಕಾಗಿ ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಸುಮಾರು 20-25 ವರ್ಷಗಳ ಕಾಲ ಸದರಿ ಈಜುಕೊಳ ಅಸ್ತಿತ್ವದಲ್ಲಿ ಇರುತ್ತದೆ ಎಂದರೆ ಇರಬಹುದು ಎಂದು ಉತ್ತರಿಸಿರುತ್ತಾರೆ. ಈಜುಕೊಳವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು ಪುರಸಭೆಯ ಕರ್ತವ್ಯ ಎಂದರೆ ಸರಿ. ನಮ್ಮ ನಿರ್ಲಕ್ಷತನದಿಂದ ಈಜುಕೊಳ ದುಸ್ಥಿತಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಈಜುಕೊಳವನ್ನು ಅದೇ ಉದ್ದೇಶಕ್ಕೆ ಹೊರತುಪಡಿಸಿ ಬೇರೆ ಯಾವುದೇ ಉದ್ದೇಶಕ್ಕೆ ಠರಾವು ಮಾಡಿರುವುದಿಲ್ಲ. ಈಜುಕೊಳದ ಉದ್ದೇಶವನ್ನು ಬದಿಗಿಟ್ಟು ನಾವು ವಾಣಿಜ್ಯ ಉದ್ದೇಶಕ್ಕಾಗಿ ನಾವು ಯೋಜನೆ ಮಾಡಿದ್ದೇವೆ ಎಂದರೆ ಸರಿಯಲ್ಲ. 2015 ರಿಂದ ಇಲ್ಲಿಯವರೆಗೆ ಈಜುಕೊಳವನ್ನು ಪುರ್ನಸ್ಥಾಪಿಸಲು ಯಾವುದೇ ಕಾನೂನಿನ ಅಡಚಣೆ ಇರುವುದಿಲ್ಲ ಎಂದರೆ ಸರಿ. ಸದರಿ ಜಾಗವನ್ನು ನಾವು ಈಜುಕೊಳವನ್ನು ಹೊರತುಪಡಿಸಿ ಬೇರೆ ಯಾವುದೇ ಉದ್ದೇಶಕ್ಕೆ ಉಪಯೋಗಿಸಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ.